2) ಕೋರ್ಟ್ ರಸ್ತೆ ವೃತ್ತ

3) ಡಾ ಅಂಬೇಡ್ಕರ್ ರಸ್ತೆ ವೃತ್ತ

4) ದುರ್ಗದಬೈಲು ವೃತ್ತ

5) ದಾಜಿಬಾನ ತುಲಜಾ ಭವಾನಿ ವೃತ್ತ

6) ಮರಾರ ವೃತ್ತ

7) ಡಾಕವ್ವ ವೃತ್ತ

ಇದಲ್ಲದೆ ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಇನ್ನೂ ಅಳವಡಿಸಲು ಉದ್ದೇಶಿಸಿರುವ ಸ್ಥಳಗಳು ಈ ಕೆಳಕಂಡಂತೆ ಇದೆ

1) 30 ಮೀಟರ್ ಹೈಮಾಸ್ಟ್ ಲೈಟ್ ಕಿತ್ತೂರು ರಾಣಿ ಚೆನ್ನಮ್ಮ ವೃತ್ತ

2) ಪ್ರತಿ 20 ಮೀಟರ್ ದುರ್ಗದಬೈಲು ವೃತ್ತ

3) ಸ್ವಿಮ್ಮಿಂಗ್‌ವೂಲ್ ರಸ್ತೆಯ ವೃತ್ತ

4) ಇಂಡಿ ಪಂಪ್ ವೃತ್ತ

5) ಕೇಶ್ವಾಪುರ ಸರ್ವೋದಯ ವೃತ್ತ

6) ಆಲೂರು ವೆಂಟರಾವ್ ವೃತ್ತ

7) ಕೋರ್ಟ್ ವೃತ್ತ

8) ವಿವೇಕಾನಂದ ವೃತ್ತ

ಇ ಉದ್ಭವಿಸುವುದಿಲ್ಲ

ತಿಕೋಟದಲ್ಲಿರುವ ವಿದ್ಯುತ್ ಕೇಂದ್ರವನ್ನು ಮೇಲ್ದರ್ಜೆಗೇರಿಸುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ನಂಖ್ಯೆ 163(412)

ಸದಸ್ಯರ ಹೆಸರು ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ(ತಿಕೋಟ)

ಉತ್ತರಿಸುವ ಸಚಿವರು ಶ್ರೀ ವೀರಕುಮಾರ್ ಆ ಪಾಟೀಲ್(ಇಂಧನ ಮಾಧ್ಯ ಸಚಿವರು)

ಪ್ರಶ್ನೆ

ಅ ಬಿಜಾಪುರ ತಾಲ್ಲೂಕಿನ ಬಿಜ್ಜರಗಿಯಲ್ಲಿ ಹೊಸದಾಗಿ 33 11 ಕೆ ವಿ ವಿದ್ಯುತ್ ವಿತರಣಾ ಕೇಂದ್ರ ಸ್ಥಾಪಿಸಲು ಮತ್ತು ತಿಕೋಟದಲ್ಲಿರುವ ವಿದ್ಯುತ್ ವಿತರಣಾ ಕೇಂದ್ರವನ್ನು ಮೇಲ್ದರ್ಜೆಗೇರಿಸಲು ಗ್ರಾಮೀಣ ವಿದ್ಯುದ್ದೀಕರಣ ನಿಗಮದಿಂದ ಆರ್ಥಿಕ ನೆರವು ಪಡೆಯಲು ಯೋಜನಾ ವರದಿ ಸಲ್ಲಿಸಲಾಗಿದೆಯೇ?

ಆ ಸಲ್ಲಿಸಿದ್ದರೆ, ನಿಗಮವು ನೆರವನ್ನು ಒದಗಿಸಿರುತ್ತದೆಯೆ ಒದಗಿಸಿದ್ದಲ್ಲಿ ಅದರ ಮೊತ್ತವೆಷ್ಟು?

ಇ ಎರಡೂ ಕಾಮಗಾರಿಗಳ ಪ್ರಗತಿಯು ಯಾವ ಹಂತದಲ್ಲಿದೆ?

ಈ ಯೋಜನಾ ವರದಿ ತಯಾರಿಸಿರದಿದ್ದರೆ ಮತ್ತು ಸಲ್ಲಿಸದಿದ್ದರೆ ಕಾರಣಗಳೇನು?

ಉ ಈ ಭಾಗದ ಜನರಿಗೆ ವಿದ್ಯುತ್ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದರೆ ಸರ್ಕಾರವು ಏನು ಕ್ರಮ ಕೈಗೊಳ್ಳುತ್ತದೆ

ಊ ಈ ಎರಡು ಅತಿ ಅವಶ್ಯಕ ಕೆಲಸಗಳನ್ನು ಎಷ್ಟು ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು?

ಉತ್ತರ

ಅ ಹೌದು

ಆ ಗ್ರಾಮೀಣ ವಿದ್ಯುದೀಕರಣ ನಿಗಮದಿಂದ ಇನ್ನೂ ಮಂಜೂರಾತಿಯನ್ನು ನಿರೀಕ್ಷಿಸಲಾಗಿದೆ

ಇ ಬಿಜ್ಜರಗಿಯಲ್ಲಿ 33 11 ಕೆ ವಿ ವಿದ್ಯುತ್ ವಿತರಣಾ ಕೇಂದ್ರ ಸ್ಥಾಪನೆಗಾಗಿ ಭೂ ಸ್ವಾಧೀನ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ

ತಿಕೋಟಾ ಉಪ ಕೇಂದ್ರದ ಕಾಮಗಾರಿಗೆ ಭೂಮಿಯಿದ್ದು ಕೆಲಸ ಕೈಗೆತ್ತಿಕೊಳ್ಳಬೇಕಾಗಿದೆ

ಈ ಎರಡೂ ಕಾಮಗಾರಿಗಳಿಗೆ ಯೋಜನಾ ವರದಿಯನ್ನು ತಯಾರಿಸಿ ಮಂಜೂರಾತಿಗಾಗಿ ಗ್ರಾಮೀಣ ವಿದ್ಯುದೀಕರಣ ನಿಗಮಕ್ಕೆ ಕಳುಹಿಸಲಾಗಿದೆ

ಉ ಹೌದು, ಒಂದಿದ ಇದಕ್ಕಾಗಿ ವಿದ್ಯುತ್ ಕೇಂದ್ರದ ಕೆಲಸವನ್ನು ವಿಶೇಷ 8 ತಾನು ವಿದ್ಯುತ್ ಯೋಜನೆಯಲ್ಲಿ ತೆಗೆದುಕೊಳ್ಳಲು ಪ್ರಾಮುಖ್ಯತ ನೀಡಲಾಗಿದೆ ಹಾಗೂ ಪ್ರಾರಂಭಿಕ ಕಾರ್ಯಗಳಿಗಾಗಿ ರೂ 5 ಲಕ್ಷ ರೂ ಗಳನ್ನು ಈ ವರ್ಷದ ಆಯವ್ಯಯ (2000-02)ದಲ್ಲಿ ಮೀಸಲಾಗಿಡಲಾಗಿದೆ

ಊ ಸಾಮಾನ್ಯವಾಗಿ ಕೆಲಸ ಕೈಗೆತ್ತಿಕೊಂಡ ನಂತರದ ಒಂದು ವರ್ಷದ ಕಾಲಾವಧಿಯಲ್ಲಿ ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಾಧ್ಯವಾಗುವುದು

ತರೀಕೆರೆ ತಾಲ್ಲೂಕಿನಲ್ಲಿ ಎಂ ಯು ಎಸ್ ಎಸ್ ತೆರೆಯುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 164(421)

ಸದಸ್ಯರ ಹೆಸರು ಶ್ರೀ ನೀಲಕಂಠಪ್ಪ ಬಿ ಆರ್ (ತರೀಕೆರೆ)

ಉತ್ತರಿಸುವ ಸಚಿವರು ಶ್ರೀ ಎೀರಕುಮಾರ್ ಆ ಪಾಟೀಲ್(ಇಂಧನ ಸಚಿವರು)

ಪ್ರಶ್ನೆ

ಅ) ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನ 1) ಶಿವನಿ, ') ಲಕ್ಕವಳ್ಳಿ, 3) ನೇರಲಕೆರೆ ಗ್ರಾಮಗಳಲ್ಲಿ ಎಂ ಯು ಎಸ್ ಎಸ್ ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಈ ಮೂರು ಗ್ರಾಮಗಳಲ್ಲಿ ಎಂ ಯು ಎಸ್ ಎಸ್ ತೆರೆಯಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆಯೇ?

ಇ) ಹಾಗಿದ್ದಲ್ಲಿ, ಈ ಕಾಮಗಾರಿಗಳು ಯಾವ ಹಂತದಲ್ಲಿದ?

ಉತ್ತರ

ಅ) ಹೌದು

ಆ) ತರೀಕೆರೆ ತಾಲ್ಲೂಕಿನ ಶಿವನಿ ಮತ್ತು ಲಕ್ಕವಳ್ಳಿ ಗ್ರಾಮಗಳಲ್ಲಿ, ವಿದ್ಯುತ್ ವಿತರಣಾ ಕೇಂದ್ರಗಳನ್ನು ಸ್ಥಾಪಿಸುವ ಕಾಮಗಾರಿಗಳಿಗೆ ನಿಗಮವು ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ ನೇರಲಕೆರೆ ಗ್ರಾಮದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ವಿದ್ಯುತ್ ವಿತರಣಾ ಕೇಂದ್ರದ ಕಾಮಗಾರಿಗೆ ನಿಗಮದ ಆಡಳಿತಾತ್ಮಕ